**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಸಿಸಿ ನಂಃ 50/2016**

**ಸಿಡಬೂಃ13 ಪಿ ಡಬ್ಲ್ಯೂಃ12**

**ಹೆಸರುಃ** ಗದಿಗೆಪ್ಪ

**ತಂದೆ ಹೆಸರುಃ** ಭೀಮಪ್ಪ ಸೋಮಣ್ಣನವರ

**ವಯಸ್ಸುಃ** 48 ವರ್ಷಗಳು.

**ಉದ್ಯೋಗಃ** ಕೂಲಿ ಕೆಲಸ

**ವಾಸ ಸ್ಥಳಃ** ಹಿರೇಬೂದಿಹಾಳ.

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ ದಿಃ 19/12/2024.**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಚಾಸಾಃ1 ರಿಂದ 12, , 15 ರಿಂದ 17, 19, 20 ರಿಂದ 36 ರವರು ನನಗೆ ಗೊತ್ತಿಲ್ಲ. ಚಾಸಾಃ14, 18 ಮತ್ತು 16 ರಿಂದ 18 ನನಗೆ ಪರಿಚಯ ಇದ್ದಾರೆ. ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ನೇ ಆರೋಪಿಗಳು ನನಗೆ ಗೊತ್ತಿಲ್ಲ, ನ್ಯಾಯಾಲಯದ ಮುಂದೆ ಈ ದಿನ 4 ಮತ್ತು 5 ನೇ ಆರೋಪಿಗಳು ಗೈರು ಹಾಜರಾಗಿದ್ದು, ಅವರ ಪರಿಚಯ ಇರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಎಲ್ಲಾ ಆರೋಪಿತರು ತಮ್ಮ ಅಧಿಕಾರಿದ ಅವಧಿಯಲ್ಲಿ ಮರೇಗಾ ಯೋಜನೆಯಡಿಯಲ್ಲಿ ಸ್ವಲ್ಪ ಕೂಲಿಕಾರ್ಮಿಕರನ್ನು ತೆಗೆದುಕೊಂಡು ಬಹಳಷ್ಟು ಮರೇಗಾ ಯೋಜನೆ ಪಟ್ಟಿಗಳಲ್ಲಿ ಕೂಲಿಕಾರರನ್ನು ನಮೂದಿಸಿದ್ದು ಹಾಗೂ ಅವರ ಖೊಟ್ಟಿ ಸಹಿಗಳನ್ನು ಮಾಡಿ ಅವರ ಖಾತೆಗೆ ಬಂದ ಹಣವನ್ನು ತಮ್ಮ ಖಾತೆಗೆ ವರ್ಗಾವಣೆ ಮಾಡಿಕೊಳ್ಳುವ ಮೂಲಕ ಸರಕಾರಕ್ಕೆ ಹಾಗೂ ಕೂಲಿಕಾರರಿಗೆ ಮೋಸ ಹಾಗೂ ನಂಬಿಕೆ ದ್ರೋಹವನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ. **(ಈ ಹಂತದಲ್ಲಿ ಮಾನ್ಯ ಸಸಅ ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ**

1. ಸುಮಾರು ನಾಲ್ಕು ಐದು ವರ್ಷಗಳ ಹಿಂದೆ ಇಂಗಳಗಿ ಗ್ರಾಮ ಪಂಚಾಯತಿ ವತಿಯಿಂದ ನಮ್ಮ ಊರಿನಲ್ಲಿ ಹಾಗೂ ಇಂಗಳಗಿ ಗ್ರಾಮದ ಹದಿನಲ್ಲಿ ರಸ್ತೆ ಸುಧಾರಣೆ ಹಾಗೂ ಹೊಸದಾಗಿ ರಸ್ತೆಯನ್ನು ಕೂಲಿಕಾರ ಜನರ ಕಡೆಯಿಂದ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ.

ರಂದು ನನ್ನ ತಂದೆ ಭೀಮಪ್ಪ ಸೋಮನವರ ಇವರ ವಯಸ್ಸಾಗಿದ್ದರಿಂದ ತೀರಿಕೊಂಡಿರತ್ತಾರೆ, ನನ್ನ ತಾಯಿ 70 ವರ್ಷ ಆಗಿದ್ದು, ಅವರು ಕೆಲಸ ಮಾಡುವ ಸ್ಥಿತಿಯಲ್ಲಿ ಇರುವುದಿಲ್ಲ. 2009-2010 ಮತ್ತು 2010-2011 ರಲ್ಲಿ ಇಂಗಳಗಿ ಗ್ರಾಮ ಪಂಚಾಯತ ನಮ್ಮ ಊರು ಮತ್ತು ಇಂಗಳಗಿ ಗ್ರಾಮ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೂಲಿಕಾರರಿಂದ ಹೊಸದಾಗಿ ರಸ್ತೆ ಮಾಡಿಸುವುದು ಮತ್ತು ರೈತರ ಹೊಲದಲ್ಲಿ ಕೃಷಿ ಹೊಂಡ ಮತ್ತು ಬದುಗಳನ್ನು ಹಾಕಿಸುವುದು, ಕೂಲಿಕಾರರಿಗೆ ಮತ್ತು ಕೂಲಿ ಹಣವನ್ನು ಅವರ ಬ್ಯಾಂಕುಗಳಲ್ಲಿ ಇದ್ದ ಉಳಿತಾಯ ಖಾತೆಗಳಿಗೆ ಜಮಾ ಮಾಡಿಸುವುದು ಗೊತಿರುತ್ತದೆ. ಪಂಚಾಯತ ನೌಕಾರರಾದ ಶಂಕ್ರಪ್ಪ ಸಂಗಣ್ಣನವರ ಮತ್ತು ಕಾರ್ಯದರ್ಶಿಯವರು ಹೇಳಿದ್ದರಿಂದ ಕೂಲಿಕಾರರ ಜನರಿಂದ ಬ್ಯಾಂಕಿನ ಪಾಸ್ ಬುಕ್ಕಗಳನ್ನು ಹಾಗೂ ನಂಬರಗಳನ್ನು ಕೊಟ್ಟು ಬಂದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಕಾಕಾ ಮಲ್ಲೇಶಪ್ಪ ಸೋಮನ್ನವರ ಇವರು ನನ್ನ ತಂದೆ ತಾಯಿಯ ಉಳಿತಾಯ ಖಾತೆಗಳನ್ನು ಶಂಕ್ರಪ್ಪ ಸಂಗಣ್ಣನವರ ಇವರಿಗೆ ಕೊಟ್ಟು ಬಂದಿರುತ್ತಾರೆ ಎಂದರೆ ಸರಿಯಲ್ಲ. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೂಲಿಕಾರ ಕೆಲಸ ಮಾಡಿದ ಹಾಜರಾತಿ ಪಟ್ಟಿಯನ್ನು ನೋಡಲಾಗಿ ಅದರಲ್ಲಿ ಸಂಃ61426 ಇದ್ದು, ಹಿರೇಬೂದಿಹಾಳದಿಂದ ನೆಲಗುಡ್ಡ ತರ್ಲಘಟ್ಟ ರಸ್ತೆ ಸುಧಾರಣಾ ಮಾಡಿರುವ ಬಗ್ಗೆ ಕೂಲಿ ಕೆಲಸಗಾರರ ಪಟ್ಟಿಯಲ್ಲಿ ಕೆಲಸ ಮಾಡಿದ ಬಗ್ಗೆ ಅ.ನಂಃ155 ಕ್ಕೆ ನನ್ನ ತಂದೆಯ ಹೆಸರು ಮತ್ತು ಅ.ನಂಃ156 ಕ್ಕೆ ನನ್ನ ತಾಯಿಯ ಹೆಸರು ಅದರ ಮುಂದೆ ಜಾಬ್ ಕಾರ್ಡ ನಂಃ28 ಅಂತ ಬರೆದಿದ್ದು, ನನ್ನ ತಂದೆ ಮತ್ತು ನನ್ನ ತಾಯಿಯ ಹೆಸರಿನ ಮುಂದೆ ಕೂಲಿ ಹಣ 700/ ತೋರಿಸಿದ್ದು ಮತ್ತು ಅದು ನಮಗೆ ಮುಟ್ಟಿದೆ ಅಂತ ಬರೆದಿದ್ದು, ಅದರ ಮುಂದೆ ಎರಡು ಜನರ ಹೆಸರು ಮುಂದೆ ರೂ 1400/ ರೂಪಾಯಿ ಮುಟ್ಟಿದೆ ಅಂತ ಖೊಟ್ಟಿ ಸಹಿಗಳನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಕೂಲಿಕಾರರ ಪಟ್ಟಿಯಲ್ಲಿ ಹಣವನ್ನು ಚೆಕ್ಕ ಮುಖಾಂತರ ಇನ್ನು 14 ಜನ ಹೆಸರುಗಳ ಖಾತೆಗಳಿಗೆ ಚೆಕ್ಕ ನಂಃ172559 ದಿಃ24.02.2010 ಮೊತ್ತ 1,53,944/ ರೂಪಾಯಿ ಇದ್ದು ಈ ಹಣವನ್ನು ಜಮಾ ಮಾಡಬೇಕು ಅಂತ ಬ್ಯಾಂಕಿಗೆ ಕೊಟ್ಟ ಲಿಸ್ಟನಲ್ಲಿ ನೋಡಿದ್ದು ಅದರಲ್ಲಿ ಅ.ನಂಃ4 ಕ್ಕೆ ನನ್ನ ತಂದೆ ಹೆಸರು ನಮೂದಿಸಿ ಹೆಸರಿನ ಮುಂದೆ ಅವನ ಬ್ಯಾಂಕ ಉಳಿತಾಯ ಖಾತೆ ನಂಬರ ನಮೂದಿಸಿ ರೂಪಾಯ 10,260/ ಜಮಾ ಮಾಡಲು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಜಮಾ ಆದ ಹಣವನ್ನು ಕೂಲಿಕಾರರಿಗ ಕೊಡುವುದು ಇದೆ ಅಂತ ಹೇಳಿ

ಕಾರ್ಯದರ್ಶಿ ಎಮ್ ಎ ನದಾಫ ಇವರು ನನ್ನ ಚಿಕ್ಕಪ್ಪನಿಂದ ನಮ್ಮ ತಂದೆಯನ್ನು ಬ್ಯಾಂಕಿಗೆ ಕರೆದುಕೊಂಡು ಹೋಗಿ ದಿಃ25.02.2010 ರಂದು ರೂ 10,260/ನ್ನು ಕಾರ್ಯದರ್ಶಿ ಎಮ್ ಎ ನದಾಫ ಇವರಿಗೆ



ಕೊಟ್ಟಿದ್ದು ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆಯ ಮರಣ ಉತಾರವನ್ನು ಸಹ ನಾನು ಪೂರೈಸಿರುತ್ತೇನೆ ಮತ್ತು ನಮ್ಮ ತಂದೆಯ ಪಾಸ್ ಬುಕ್ ಅನ್ನು ಇನ್ನುವರೆಗೆ ಗ್ರಾಮ ಪಂಚಾಯತಿ ಇವರು ವಾಪಾಸು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ನಮ್ಮ ತಂದೆ ಖಾತೆಗೆ ರೂ 10,260/ ಜಮಾ ಮಾಡಿ ಗ್ರಾಮ ಪಂಚಾಯತ ಅಧ್ಯಕ್ಷರು ಕಾರ್ಯದರ್ಶಿಗಳು ಮತ್ತು ಸದಸ್ಯರು ಮೀಲಾಪೆಯಾಗಿ ಕೂಲಿಕಾರ ಹಣವನ್ನು ತಮ್ಮ ಸ್ವಂತಕ್ಕೆ ದುರ್ಬಳಕ್ಕೆ ಮಾಡಿಕೊಂಡು ಸರಕಾರಕ್ಕೆ ಮತ್ತು ಕೂಲಿಕಾರ್ಮಿಕರಿಗೆ ಮೋಸ ಹಾಗೂ ನಂಬಿಕೆ ದ್ರೋಹ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಎಮ್ ಎ ನದಾಫ ಕಾರ್ಯದರ್ಶಿ ಇವರು , ಕ್ಲರ್ಕ ಶಂಕ್ರಪ್ಪ ಹಾಗೂ ಅಧ್ಯಕ್ಷ್ಯರಾದ ನೀಲವ್ವ ಭದ್ರಾಪುರ ಇವರು ಮೀಲಾಪೆಯಾಗಿ ತಮ್ಮ ಸ್ವಂತ ಲಾಭಕ್ಕಾಗಿ ನನ್ನ ಖಾತೆಗೆ ಬೇರೆ ಕೂಲಿಕಾರರ ಹಣ ಜಮಾ ಮಾಡಿರುವುದಾಗಿ ಸುಳ್ಳು ಹೇಳಿ ನಂಬಿಸಿ ನಮ್ಮಿಂದ ರೂ 10,260/ ರೂಪಾಯಿಗಳನ್ನು ಪಡೆದುಕೊಂಡು ತಮ್ಮ ಸ್ವಂತಕ್ಕೆ ದುರುಪಯೋಗ ಮಾಡಿಕೊಂಡು ನನಗೆ ಮತ್ತು ಸರಕಾರಕ್ಕೆ ಹಾಗೂ ಕೂಲಿ ಕಾರ್ಮಿಕರಿಗೆ ಮೋಸ ಮತ್ತು ನಂಬಿಕೆ ದ್ರೋಹ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನನಗೆ ಈ ಪ್ರಕರಣದ ಎಲ್ಲಾ ಸಂಗತಿಗಳು ಗೊತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಓದಿ ಹೇಳಿಕೆಯನ್ನು ನಿಪಿಃ19 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**

**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಸಿಸಿ ನಂಃ 50/2016**

**ಸಿಡಬ್ಲೂಃ14 ಪಿ ಡಬ್ಲ್ಯೂಃ13**

**ಹೆಸರುಃ ಗೀರಿಜವ್ವ**

**ಗಂಡನ ಹೆಸರುಃ ನಾಗಪ್ಪ ಬಾರಕೇರ**

**ವಯಸ್ಸುಃ 40 ವರ್ಷಗಳು.**

**ಉದ್ಯೋಗಃ ವ್ಯವಸಾಯ**

**ವಾಸ ಸ್ಥಳಃ ಹಿರೇಬೂದಿಹಾಳ.**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 19/12/2024.**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಚಾಸಾಃ1 ರಿಂದ 13, 15 ರಿಂದ 18, ಚಾಸಾಃ20 ರಿಂದ 36 ರವರು ನನಗೆ ಗೊತ್ತಿಲ್ಲ. ಚಾಸಾಃ19 ನನ್ನ ಗಂಡ. ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ನೇ ಆರೋಪಿಗಳು ನನಗೆ ಗೊತ್ತಿಲ್ಲ, ನ್ಯಾಯಾಲಯದ ಮುಂದೆ ಈ ದಿನ 4 ಮತ್ತು 5 ನೇ ಆರೋಪಿಗಳು ಗೈರು ಹಾಜರಾಗಿದ್ದು, ಅವರ ಪರಿಚಯ ಇರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಎಲ್ಲಾ ಆರೋಪಿತರು ತಮ್ಮ ಅಧಿಕಾರಿದ ಅವಧಿಯಲ್ಲಿ ಮರೇಗಾ ಯೋಜನೆಯಡಿಯಲ್ಲಿ ಸ್ವಲ್ಪ ಕೂಲಿಕಾರ್ಮಿಕರನ್ನು ತೆಗೆದುಕೊಂಡು ಬಹಳಷ್ಟು ಮರೇಗಾ ಯೋಜನೆ ಪಟ್ಟಿಗಳಲ್ಲಿ ಕೂಲಿಕಾರರನ್ನು ನಮೂದಿಸಿದ್ದು ಹಾಗೂ ಅವರ ಖೊಟ್ಟಿ ಸಹಿಗಳನ್ನು ಮಾಡಿ ಅವರ ಖಾತೆಗೆ ಬಂದ ಹಣವನ್ನು ತಮ್ಮ ಖಾತೆಗೆ ವರ್ಗಾವಣೆ ಮಾಡಿಕೊಳ್ಳುವ ಮೂಲಕ ಸರಕಾರಕ್ಕೆ ಹಾಗೂ ಕೂಲಿಕಾರರಿಗೆ ಮೋಸ ಹಾಗೂ ನಂಬಿಕೆ ದ್ರೋಹವನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ**

1. ಸುಮಾರು ನಾಲ್ಕು ಐದು ವರ್ಷಗಳ ಹಿಂದೆ ಇಂಗಳಗಿ ಗ್ರಾಮ ಪಂಚಾಯತಿ ವತಿಯಿಂದ ನಮ್ಮ ಊರಿನಲ್ಲಿ ಹಾಗೂ ಇಂಗಳಗಿ ಗ್ರಾಮದ ಹದ್ದಿನಲ್ಲಿ ರಸ್ತೆ ಸುಧಾರಣೆ ಹಾಗೂ ಹೊಸದಾಗಿ ರಸ್ತೆಯನ್ನು ಕೂಲಿಕಾರ ಜನರ ಕಡೆಯಿಂದ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. 2009-2010

ಮತ್ತು 2010-2011 ರಲ್ಲಿ ಇಂಗಳಗಿ ಗ್ರಾಮ ಪಂಚಾಯತ ನಮ್ಮ ಊರು ಮತ್ತು ಇಂಗಳಗಿ ಗ್ರಾಮ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೂಲಿಕಾರರಿಂದ ಹೊಸದಾಗಿ ರಸ್ತೆ ಮಾಡಿಸುವುದು ಮತ್ತು ರೈತರ ಹೊಲದಲ್ಲಿ ಕೃಷಿ ಹೊಂಡ ಮತ್ತು ಬದುಗಳನ್ನು ಹಾಕಿಸುವುದು, ಕೂಲಿಕಾರರಿಗೆ ಮತ್ತು ಕೂಲಿ ಹಣವನ್ನು ಅವರ ಬ್ಯಾಂಕುಗಳಲ್ಲಿ ಇದ್ದ ಉಳಿತಾಯ ಖಾತೆಗಳಿಗೆ ಜಮಾ ಮಾಡಿಸುವುದು ಗೊತಿರುತ್ತದೆ. ಪಂಚಾಯತ ನೌಕಾರರಾದ ಶಂಕ್ರಪ್ಪ ಸಂಗಣ್ಣನವರ ಮತ್ತು ಕಾರ್ಯದರ್ಶಿಯವರು ಹೇಳಿದ್ದರಿಂದ ಕೂಲಿಕಾರರ ಜನರಿಂದ ಬ್ಯಾಂಕಿನ ಪಾಸ್ ಬುಕ್ಕಗಳನ್ನು ಹಾಗೂ ನಂಬರಗಳನ್ನು ಕೊಟ್ಟು ಬಂದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಗಂಡನ ಉಳಿತಾಯ ಖಾತೆಯ ಪಾಸ್ ಬುಕ್ಕನ್ನು ಶಂಕ್ರಪ್ಪ ಸಂಗಣ್ಣನವರ ಇವರಿಗೆ ಕೊಟ್ಟು ಬಂದಿರುತ್ತೇವೆ ಎಂದರೆ ಸರಿಯಲ್ಲ. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೂಲಿಕಾರ ಕೆಲಸ ಮಾಡಿದ ಹಾಜರಾತಿ ಪಟ್ಟಿಯನ್ನು ನೋಡಲಾಗಿ ಅದರಲ್ಲಿ ಸಂಃ61426 ಇದ್ದು, ಹಿರೇಬೂದಿಹಾಳದಿಂದ ನೆಲಗುಡ್ಡ ತರ್ಲಘಟ್ಟ ರಸ್ತೆ ಸುಧಾರಣಾ ಮಾಡಿರುವ ಬಗ್ಗೆ ಕೂಲಿ ಕೆಲಸಗಾರರ ಪಟ್ಟಿಯಲ್ಲಿ ಕೆಲಸ ಮಾಡಿದ ಬಗ್ಗೆ ಅ.ನಂಃ204 ಕ್ಕೆ ನನ್ನ ಹೆಸರು ನಮೂದಿಸಿ, ನನ್ನ ಗಂಡನ ಜಾಬ ಕಾರ್ಡ ನಂಃ87 ಅಂತ ಹೆಸರು ನಮೂದಿಸಿ, ಹೆಸರಿನ ಮುಂದೆ ಕೂಲಿ ಹಣ 700/ ತೋರಿಸಿದ್ದು ಮತ್ತು ಅದು ನಮಗೆ ಮುಟ್ಟಿದೆ ಅಂತ ಹೆಬ್ಬಟಿನ ಸಹಿ ಮಾಡಲಾಗಿದ್ದು, ಆದರೆ ಹೆಬ್ಬಟ್ಟಿನ ಸಹಿಯನ್ನು ನನ್ನದು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಮೇಲಿನ ಕೂಲಿಕಾರರ ಪಟ್ಟಿಯಲ್ಲಿಯ ಹಣವನ್ನು ಚೆಕ್ಕ ಮುಖಾಂತರ ಶಂಭು ಸೋಮನ್ನವರ ಹಾಗೂ ಉಳಿತಾಯ ಖಾತೆಗಳಿಂದ ಒಟ್ಟು 15 ಜನರ ಖಾತೆಗಳಿಗೆ ಚೆಕ್ಕ ನಂಃ172559 ದಿಃ24.02.2010 ಮೊತ್ತ 1,53,944/ ರೂಪಾಯಿ ಇದ್ದು ಈ ಹಣವನ್ನು ಜಮಾ ಮಾಡಬೇಕು ಅಂತ ಬ್ಯಾಂಕಿಗೆ ಕೊಟ್ಟ ಲಿಸ್ಟನಲ್ಲಿ ನೋಡಿದ್ದು ಅದರಲ್ಲಿ ಅ.ನಂಃ5 ಕ್ಕೆ ನನ್ನ ಹೆಸರು ನಮೂದಿಸಿ ಹೆಸರಿನ ಮುಂದೆ ನನ್ನ ಬ್ಯಾಂಕ ಉಳಿತಾಯ ಖಾತೆ ನಂಬರ ನಮೂದಿಸಿ ರೂಪಾಯ 10,260/ ಜಮಾ ಮಾಡಲು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಈ ಲಿಸ್ಟಗೆ ಹಾಗೂ ಚೆಕ್ಕಿನ ಮೇಲೆ ಪಂಚಾಯತಿ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಇವರ ಸಹಿ ಇರುತ್ತದೆ ಎಂದರೆ ಸರಿಯಲ್ಲ. ದಿಃ25.02.2010 ರಂದು ರೂ 10,260/ ಜಮಾ ಆಗಿದ್ದು, ನನ್ನ ಕೂಲಿ ಹಣವಾದ ರೂ 700/ ಮುರಿದುಕೊಂಡು ಉಳಿದ ರೂ 9,560/ ಗಳನ್ನು ಕಾರ್ಯದರ್ಶಿ ಎಮ್ ಎ ನದಾಫ ಇವರಿಗೆ ಕೊಟ್ಟಿದ್ದು ಇರುತ್ತದೆ ಎಂದರೆ ಸರಿಯಲ್ಲ. ಅದೇ ಪ್ರಕಾರ ಕೂಲೀಕಾರ ಪಟ್ಟಿ ನೋಡಲಾಗಿ ಪಟ್ಟಿ ನಂಃ61958 ನೋಡಲಾಗಿ ಅದರಲ್ಲಿ ಅ.ನಂಃ146 ಕ್ಕೆ ನನ್ನ ಹೆಸರು ನಮೂದಿಸಿ ನನ್ನ ಗಂಡನ ಜಾಬ್ ಕಾರ್ಡನ ನಂಃ87 ಅಂತ ಬರೆದು

ಹೆಸರಿನ ಮುಂದೆ ರೂ 700/ ಕೊಟ್ಟಂತೆ ನಮೂದಿಸಿ ಹೆಬ್ಬಟ್ಟಿನ ಸಹಿ ಮಾಡಲಾಗಿತ್ತು



ಎಂದರೆ ಸರಿಯಲ್ಲ. ಚೆಕ್ಕ ನಂಃ172567 ದಿಃ03.04.2010 ಮೊತ್ತ 1,08,150/ ಇದ್ದು, ಪೆಯಿಜ್ ಲಿಸ್ಟನಲ್ಲಿ ನನ್ನ ಹೆಸರನ್ನು ಅನಂಃ3 ಕ್ಕೆ ಬರೆದು ಖಾತೆ ನಂಬರ ನಮೂದಿಸಿ ನನ್ನ ಹೆಸರಿಗೆ 10,800/ ರೂ ಜಮಾ ತೆಗೆದುಕೊಳ್ಳಲು ಬರೆಲಾಗಿದ್ದು, ಅದಕ್ಕೆ ಆಡಳಿತಾಧಿಕಾರಿ ಅಂತ ಸೀಲ್ ಹಾಕಿ ಸಹಿ ಮಾಡಲಾಗಿ ಅದು ದಿಃ06.04.2010 ಕ್ಕೆ ಜಮಾ ಆಗಿರುತ್ತದೆ ಎಂದರೆ ಸರಿಯಲ್ಲ.

ಕೂಲಿಕಾರರ ಪಟ್ಟಿ ನಂಃ62627 ಇದ್ದು ನನ್ನ ಹೆಸರು ಅದರಲ್ಲಿ ಇರುವುದಿಲ್ಲ, ಚೆಕ್ಕ ನಂಃ172568 ದಿಃ03.04.2010 ಮೊತ್ತ 1,08,150/ ಇದ್ದು ಪೆಯಿಜ್ ಲಿಸ್ಟನಲ್ಲಿ ನನ್ನ ಹೆಸರು ಅ.ನಂಃ3 ಕ್ಕೆ ನನ್ನ ಖಾತೆ ನಂಬರ ಬರೆದು ರೂ 10,800/ ರೂ ಜಮಾ ಆಗಿದೆ ಅಂತ ಬರೆಯಲಾಗಿದ್ದು, ದಿಃ06.04.2010 ರಂದು ಜಮಾ ಆಗಿರುತ್ತದೆ ಸರಿಯಲ್ಲ.

ಪಂಚಾಯತ ಸದಸ್ಯರು ಮತ್ತು ಕಾರ್ಯದರ್ಶಿಗಳು ಬ್ಯಾಂಕಿನಿಂದ ಹಣ ತೆಗೆಸಿಕೊಡಲು ಕೇಳಿದ್ದು ಅದರಂತೆ ನನ್ನ ಖಾತೆಗೆ ಜಮಾ ಆದ ರೂ 21,600/ ದಿಃ09.04.2010 ರಂದು ಕಾರ್ಯದರ್ಶಿಗಳಿಗೆ ಕೊಟ್ಟಿರುತ್ತೇನೆ, ಈ ಪ್ರಕಾರ ನನಗೆ ಕೂಲಿ ಹಣ ರೂ 1,400/ ಕೊಟ್ಟರು ಎಂದರೆ ಸರಿಯಲ್ಲ.

ಈ ಪ್ರಕಾರ ಒಟ್ಟು ರೂ 30,460/ನನ್ನ ಖಾತೆಗೆ ಜಮಾ ಆದ ಹಣವನ್ನು ಗ್ರಾಮ ಪಂಚಾಯತ ಅಧ್ಯಕ್ಷರು ಕಾರ್ಯದರ್ಶಿಗಳು ಮತ್ತು ಸದಸ್ಯರು ಮೀಲಾಪೆಯಾಗಿ ಕೂಲಿಕಾರ ಹಣವನ್ನು ತಮ್ಮ ಸ್ವಂತಕ್ಕೆ ದುರ್ಬಳಕ್ಕೆ ಮಾಡಿಕೊಂಡು ಸರಕಾರಕ್ಕೆ ಮತ್ತು ಕೂಲಿಕಾರ್ಮಿಕರಿಗೆ ಮೋಸ ಹಾಗೂ ನಂಬಿಕೆ ದ್ರೋಹ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಎಮ್ ಎ ನದಾಫ ಕಾರ್ಯದರ್ಶಿ ಇವರು , ಕ್ಲರ್ಕ ಶಂಕ್ರಪ್ಪ ಹಾಗೂ ಅಧ್ಯಕ್ಷ್ಯರಾದ ನೀಲವ್ವ ಭದ್ರಾಪುರ ಇವರು ಮೀಲಾಪೆಯಾಗಿ ತಮ್ಮ ಸ್ವಂತ ಲಾಭಕ್ಕಾಗಿ ನನ್ನ ಖಾತೆಗೆ ಬೇರೆ ಕೂಲಿಕಾರರ ಹಣ ಜಮಾ ಮಾಡಿರುವುದಾಗಿ ಸುಳ್ಳು ಹೇಳಿ ನಂಬಿಸಿ ನಮ್ಮಿಂದ ರೂ 21,600/ ರೂಪಾಯಿಗಳನ್ನು ಪಡೆದುಕೊಂಡು ತಮ್ಮ ಸ್ವಂತಕ್ಕೆ ದುರುಪಯೋಗ ಮಾಡಿಕೊಂಡು ನನಗೆ ಮತ್ತು ಸರಕಾರಕ್ಕೆ ಹಾಗೂ ಕೂಲಿ ಕಾರ್ಮಿಕರಿಗೆ ಮೋಸ ಮತ್ತು ನಂಬಿಕೆ ದ್ರೋಹ ಮಾಡಿರುತ್ತಾರೆ  ಎಂದರೆ ಸರಿಯಲ್ಲ.

ನನಗೆ ಈ ಪ್ರಕರಣದ ಎಲ್ಲಾ ಸಂಗತಿಗಳು ಗೊತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಓದಿ ಹೇಳಿಕೆಯನ್ನು ನಿಪಿಃ20 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

SD/-

**ದಿವಾಣಿ ನ್ಯಾಯಾಧೀಶರು ಹಾಗೂ  ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**